2019 ಕ.ತೀ.ವ 1590

(ಧಾರವಾಡ ಪೀಠ)

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್**

**ಆನಂದ ಮಂಜುನಾಥ್ ನಾಯಕ್ –ವಿರುದ್ಧ– ಕರ್ನಾಟಕ ರಾಜ್ಯ (ಕಾರ್ಯದರ್ಶಿಯವರಿಂದ ಪ್ರತಿನಿಧಿತ, ಗೃಹ ಇಲಾಖೆ) ಮತ್ತು ಇತರರು***

ಭಾರತ ಸಂವಿಧಾನದ 226ನೇ ಅನುಚ್ಛೇದದಡಿಯಲ್ಲಿನ ರಿಟ್ ಅರ್ಜಿ.

ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರು ಕ್ರಿಮಿನಲ್ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಪ್ರಾರ್ಥಿಸಿದ್ದಾರೆ.

ಈ ಕ್ರಿಮಿನಲ್ ಪ್ರಕರಣದಲ್ಲಿ ರಾಜ್ಯ ಸರ್ಕಾರದ ಪೋಲೀಸ್ ವಿಚಾರಣಾ ಅಧಿಕಾರಿಗಳು ಸೂಕ್ತವಾದ ತನಿಖೆಯನ್ನು ಮಾಡಿ ಮೂರು ತಿಂಗಳ ಒಳಗಾಗಿ ವರದಿಯನ್ನು ಸಲ್ಲಿಸಬೇಕೆಂದು ನಿರ್ದೇಶನವನ್ನು ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಿದೆ.

ಅರ್ಜಿದಾರರ ಪರ: ಶ್ರೀ ದತ್ತಾತ್ರೇಯ ಜೆ. ನಾಯಕ್, ವಕೀಲರು.
1, 3, 4 ಮತ್ತು 5ನೇ ಪ್ರತ್ಯರ್ಜಿದಾರರ ಪರ: ಶ್ರೀಮತಿ ವೀಣಾ ಹೆಗಡೆ, ಎಜಿಎ;
2ನೇ ಪ್ರತ್ಯರ್ಜಿದಾರರ ಪರ: ಶ್ರೀ ಎಂ.ಬಿ. ಕಣವಿ, ಸಿಜಿಎಸ್‌ಸಿ

*ರಿಟ್ ಅರ್ಜಿ ಸಂಖ್ಯೆ: 104141/2017 (ಜಿಎಂ–ಆರ್‌ಇಎಸ್), ದಿನಾಂಕ 11ನೇ ಮಾರ್ಚ್, 2019.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್:**

ಅರ್ಜಿದಾರರ ಅಹವಾಲುಗಳು ಸ್ಥಳೀಯ ರಾಜಕಾರಣಿಗಳು ಮುಕ್ತ ಹಾಗೂ ನ್ಯಾಯೋಚಿತ ತನಿಖೆಯ ಹಾದಿಯಲ್ಲಿ ಸಾಗಿ ಬಂದಿರುವುದರಿಂದ, ಕೇಂದ್ರ ತನಿಖಾ ದಳಕ್ಕೆ ಅಪರಾಧ ಸಂಖ್ಯೆ: 2007ರ 57 ತನಿಖೆಯನ್ನು ವಹಿಸಲು ಉದ್ದೇಶಿಸಿರುವುದಕ್ಕೆ ಸಂಬಂಧಿಸಿರುತ್ತದೆ.

2. ನೋಟೀಸುಗಳನ್ನು ಕಳುಹಿಸಿದ ತರುವಾಯ, ಮಾನ್ಯ ಎಜಿಎ ಶ್ರೀಮತಿ ವೀಣಾ ಹೆಗಡೆರವರು ಪ್ರತ್ಯರ್ಜಿದಾರ ಸಂಖ್ಯೆ: 1, 3, 4 ಹಾಗೂ 5ರ ಪರ ಹಾಜರಾಗಿರುತ್ತಾರೆ. ಎರಡನೇ ಪ್ರತ್ಯರ್ಜಿದಾರ ಕೇಂದ್ರ ಸರ್ಕಾರದ ಪರ ಮಾನ್ಯ ಸಿಜಿಎಸ್‌ಸಿ ಶ್ರೀ ಎಂ.ಬಿ. ಕಣವಿಯವರು ಹಾಜರಾಗಿರುತ್ತಾರೆ; ಖಾಸಗಿ ಪ್ರತ್ಯರ್ಜಿದಾರರಿಗೆ ನೋಟೀಸುಗಳನ್ನು, ಕಾಲಮಿತಿಯಲ್ಲಿ ನ್ಯಾಯೋಚಿತವಾಗಿ, ಮುಕ್ತವಾಗಿ ಹಾಗೂ ಪರಿಣಾಮಕಾರಿಯಾಗಿ ತನಿಖೆಯನ್ನು ಪೂರ್ಣಗೊಳಿಸುವುದಕ್ಕೆ ಸಂಬಂಧಿಸಿದಂತೆ ನಿರ್ದೇಶನ ನೀಡಬೇಕೆಂಬ ಯಾವುದೇ ಬಾಧಕವಿಲ್ಲದ ಪ್ರಾರ್ಥನೆಯನ್ನು ಮಾಡುವುದರೊಂದಿಗೆ ನೀಡಿರುತ್ತಾರೆ.

3. ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ತಮ್ಮ ಮುಖ್ಯ ಕೋರಿಕೆಯ ನಿಬಂಧನೆಗಳಲ್ಲಿ ರಿಟ್ ಅರ್ಜಿಯನ್ನು ವಿರೋಧಿಸಿದ ತರುವಾಯ ರಾಜ್ಯ ಪೊಲೀಸ್ ಸಂಸ್ಥೆಯು ಸಮರ್ಥ ಸಂಸ್ಥೆಯಾಗಿದ್ದು, ಕಾನೂನಿಗನುಸಾರವಾಗಿ, ಕಾಲಮಿತಿಯಲ್ಲಿ ಅಪರಾಧಕ್ಕೆ ಸಂಬಂಧಿಸಿದಂತೆ ಮುಕ್ತ, ನ್ಯಾಯೋಚಿತ ಹಾಗೂ ಪರಿಣಾಮಕಾರಿ ತನಿಖೆಯನ್ನು ನಡೆಸುವಂಥದ್ದಾಗಿರುತ್ತದೆ. ಆದ್ದರಿಂದ ಕೇಂದ್ರ ತನಿಖಾ ದಳಕ್ಕೆ ತನಿಖೆಗಾಗಿ ಮುಖ್ಯ ವಿಷಯವನ್ನು ವಹಿಸುವುದಕ್ಕೆ ಸಂಬಂಧಿಸಿದಂತೆ ನಿರುಪಾಧಿಕವಾಗಿ

ಯಾವುದೇ ಸಮರ್ಥನೆಯಿರುವುದಿಲ್ಲವೆಂದೂ ನಿವೇದಿಸಿಕೊಂಡಿರುತ್ತಾರೆ. ಈ ನಿವೇದನೆ ನ್ಯಾಯೋಚಿತವೂ ಹಾಗೂ ಯುಕ್ತವೂ ಆಗಿದ್ದು, ಇದರೊಂದಿಗೆ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳೂ ಸಹಮತವನ್ನು ಹೊಂದಿರುತ್ತಾರೆ.

4. ಮೇಲಿನ ಸಂದರ್ಭಗಳಲ್ಲಿ ಈ ರಿಟ್ ಅರ್ಜಿ ಭಾಗಶಃ ಯಶಸ್ವಿಯಾಗಿದ್ದು, ಮ್ಯಾಂಡಮಸ್ ರಿಟ್ ಅನ್ನು, ಅರ್ಜಿದಾರರೂ ಸಹ ಈ ಪ್ರಕ್ರಿಯೆಯಲ್ಲಿ ಸಹಕರಿಸುವುದಕ್ಕೆ ಒಳಪಟ್ಟು ಯಾವುದೇ ಬಾಹ್ಯ ಏಜೆನ್ಸಿಗಳಿಂದ ಪ್ರಭಾವಿತವಾಗದೆ ಮೂರು ತಿಂಗಳುಗಳ ಅವಧಿಯೊಳಗೆ ಐದನೇ ಅರ್ಜಿದಾರ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 2007ರ 57ರಲ್ಲಿ ಇಡೀ ತನಿಖೆಯನ್ನು ಪೂರ್ಣಗೊಳಿಸಲು ಪ್ರತ್ಯರ್ಜಿದಾರ ಸಂಖ್ಯೆ:4 ಹಾಗೂ 5ಕ್ಕೆ ನೀಡಲಾಗಿರುತ್ತದೆ.